**Code No. 10 X(C)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

ಜನವರಿ, 2018

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :*** 1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತರಪಿನಲ್ಲಿ ಬೆರಳಚ್ಚು ಮಾಡಬೇಕು.

2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.

3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ವಿವಾಹ ಬಿಡಿಸಲಾಗದ ಅನುಬಂಧ ವಿವಾಹ ಎನ್ನುವ ಮೂರು ಅಕ್ಷರಗಳು ಇದು ಇಬ್ಬರು ವ್ಯಕ್ತಿಗಳ ನಡುವೆ ಮೂರು ಗುಂಟಿನ ಬಂಧನದ ಮೂಲಕ ಹೊಸ ಬದುಕಿನ ವಿನೂತನ ಸಂಬಂಧಕ್ಕೆ ದಾರಿ ಮಾಡಿಕೊಡುತ್ತದೆ. ಹಿಂದೂ ವೈವಾಹಿಕ ಪ್ರಕ್ರಿಯೆಯಲ್ಲಿ ಸಪ್ತಪದಿಗೆ ಮಹತ್ವದ ಸ್ಥಾನವಿದೆ, ಸಪ್ತಪದಿ ಎಂದರೆ ಏಳು ಹೆಜ್ಜೆಗಳಿಗೆ ಹೆಚ್ಚು ಮಹತ್ವವಿದೆ. ಇದು ಇಬ್ಬರೂ ಒಟ್ಟಾಗಿ ನಡೆಯುವ ಪ್ರಕ್ರಿಯೆ. ಹೀಗೆ ನಡೆಯುವುದರಿಂದ ಎರಡು ಪರಮಾರ್ಥಗಳು ಅಂತಲೀನ ಆಗಿರುತ್ತದೆ. ಒಂದು ಬದುಕಲ್ಲಿ ಇಬ್ಬರು ಸೇರಿ ಹೀಗೆ ಒಟ್ಟಾಗಿ ನಡೆಯೋಣ, ಕಷ್ಟಸುಖದಲ್ಲಿ ಎರಡರಲ್ಲೂ ನಾವು ಬದುಕಿರುವಷ್ಟು ಕಾಲದವರೆಗೂ ಹೀಗೆಯೇ ಒಟ್ಟಾಗಿ ಸಾಗೋಣ ಎಂದು ವರ ವಧುವಿನ ಜೊತೆ ಸಪಪದಿ ತುಳಿಯುವ ಮೂಲಕ ಪ್ರಮಾಣೀಕರಿಸುತ್ತಾರೆ. ಮದುವೆ ಸಂಭ್ರಮದಲ್ಲಿ ನಡೆಸುವ ಈ ಸಪ್ತಪದಿ ಎರಡು ಜೀವಿಗಳು ದಾಂಪತ್ಯದ ಬದುಕಲ್ಲಿ ಒಟ್ಟಾಗಿ ನಡೆಯುವುದರ ಸಾಕ್ಷಿ ಆಗುತ್ತದೆ. ಮದುವೆಯಿಂದ ಆರಂಭವಾಗುವ ಈ ಹೆಜ್ಜೆಗಳ ಉದ್ದೇಶ ಮುಂದೆ ಎಷ್ಟೇ ಕಷ್ಟ ಬರಲಿ, ತೊಂದರೆ ಎದುರಾಗಲಿ ಒಟ್ಟಾಗಿ ಎದುರಿಸಿ ಬಾಳಬೇಕು ಎಂಬುದನ್ನು ತಿಳಿಸುತ್ತದೆ.

ಎಂದಿಗೂ ಒಟ್ಟಾಗಿ ಇರಬೇಕೆಂಬುದು ಇದರ ಮೂಲಮಂತ್ರ, ಆಗಷ್ಟೇ ಸಪ್ತಪದಿಗೆ ಸಾರ್ಥಕತೆ ಸಿಗುವುದು. ವಿವಾಹದಲ್ಲಿ ಯಾವುದೇ ಇಬ್ಬರ ನಡುವೆ ಒಂದೇ ರೀತಿಯ ಅಭಿಪ್ರಾಯ ಇರಲು ಸಾಧ್ಯವಿಲ್ಲ. ಆದರೆ ವೈವಾಹಿಕ ಬಾಂಧವ್ಯದಲ್ಲಿ ಒಂದಾದ ದಂಪತಿಗಳ ವಿಷಯದಲ್ಲಿ ಹಾಗಾಗದು. ಗಂಡ ಹೆಂಡತಿಯರು

[ Turn over

ಭಿನ್ನ ಶರೀರದವರು, ಆದರೂ ಅಸಾಧ್ಯ ಆದುದನ್ನು ಸಾಧ್ಯ ಮಾಡಿಸುವುದು ಮಂಗಳಸೂತ್ರ. ಈ ರೀತಿಯಾಗಿ ಇಬ್ಬರೂ ಶಾರೀರಿಕ ಹಾಗೂ ಮಾನಸಿಕವಾಗಿ ಒಂದಾದಂತೆ ಮನಸ್ಸಿನಲ್ಲಿ ಆಲೋಚನೆಗಳು ಸಹ ಏಕವಾದಾಗ ಸಂಸಾರದ ನೌಕೆ ಸರಾಗವಾಗಿ ನಡೆಯುತ್ತದೆ. ಅಂತಹ ದಾಂಪತ್ಯ ಸಕ್ಕರೆ ಹಾಲು ಹದವಾಗಿ ಬೆರೆತ ರುಚಿಯಾದ ಕಾಫಿಯಂತೆ ಇರುತ್ತದೆ. ಗಂಡ ಹೆಂಡಿರ ಮೈತ್ರಿ ಒಂದು ಮಧುರವಾದ ಭಾವನೆ. ಹಿಂದಿನ ಕಾಲದಲ್ಲಿ ಹೆಣ್ಣನ್ನು ತೋರಿಸುವ ಕ್ರಿಯೆಯಲ್ಲಿ ಪತಿ ಪತ್ನಿಯರ ನೋಟಕ್ಕೆ ಪರಿಮಿತಿ ಇರುತ್ತಿತ್ತು. ಅವರು ಮಾತನಾಡುವುದಕ್ಕೆ ಅವಕಾಶ ಇರುತ್ತಿರಲಿಲ್ಲ. ಆದರೆ ಈಗ ಹಾಗಿಲ್ಲ, ವಧೂವರರು ಮಾತನಾಡಿಕೊಳ್ಳುವ ಅವಕಾಶ ಪರಸ್ಪರ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಮಾರ್ಗ ಕಲ್ಪಿಸಿಕೊಡುತ್ತಿದ್ದಾರೆ.

ಆದ್ದರಿಂದ ಅಂತಹ ಅವಕಾಶವನ್ನು ಇವರು ಸದುಪಯೋಗ ಮಾಡಿಕೊಂಡು ಪರಸ್ಪರ ಮಾತಿನ ಮೂಲಕ ಇಷ್ಟಾ ನಿಷ್ಟಗಳನ್ನು ತಿಳಿದುಕೊಳ್ಳಬಹುದು. ಸ್ತ್ರೀ ಪುರುಷರಿಬ್ಬರೂ ಉದ್ಯೋಗ ಮಾಡುತ್ತಿದ್ದು ಮದುವೆಗೆ ಮುನ್ನ ಕೆಲವು ಸಂಗತಿಗಳ ಬಗ್ಗೆ ಚರ್ಚಿಸಿದರೆ, ವಿವಾಹ ನಂತರ ತೊಂದರೆ ತಕರಾರಿಗೆ ದಾರಿಯಿರದು. ವಿವಾಹಕ್ಕೆ ಮೊದಲು ವಧುವರರು ಚರ್ಚಿಸಿಕೊಳ್ಳಬೇಕಾದ ಮುಖ್ಯಾಂಶಗಳು, ವೃತ್ತಿ ಅಭ್ಯಾಸಗಳು, ಅಭಿರುಚಿಗಳು, ಆರ್ಥಿಕ ವಿಷಯಕ್ಕೆ ಸಂಬಂಧಪಟ್ಟ ಸ್ಥಿತಿಗಳು, ಉದ್ಯೋಗದಲ್ಲಿ ಸಹವರ್ತಿಗಳ ಬಗ ವಧುವರರು ಚರ್ಚಿಸಿಕೊಳ್ಳಬೇಕಾದ ಅಂಶಗಳು.